# ರಂಜನೆಯ ಹೂವಿಗೆ ಮೌಲ್ಯದ ಗಂಧ

■ ಪದ್ಮನಾಭ ಭಟ್



**ಜನರನ್ನು ರಂಜಿಸುವುದು ತುಂಬಮುಖ್ಯ. ಆ ರಂಜನೆಯ ಧಾಟಿಯಲ್ಲಿಯೇ ಮಾನವೀಯ ಮೌಲ್ಯಗಳನ್ನು ಕಾಣಿಸಬೇಕು ಎಂಬುದು ಗಣೇಶ್ ನಿಲುವು. ಎರಡು ದಶಕದ ಸಿನಿಮಾ ಪಯಣದ ದಾರಿಯ ಕುರಿತು ಅವರ ಜೊತೆಗಿನ ಮಾತುಕತೆ ಇಲ್ಲಿದೆ.**

'ನನ್ ಜೀವನದಲ್ಲಿ ಅರ್ಧ ಆಯಸ್ಸನ್ನು ಇಲ್ಲೇ ಕಳ್ದಿದೀನಿ' ಎಂದು ತಮ್ಮ ಸಿಗ್ನೇಚರ್ ಸ್ಟೈಲ್‌ನಲ್ಲಿ ನಕ್ಕರು ಗಣೇಶ್. ನಲ್ವತ್ಮೂರನೇ ಜನ್ಮದಿನವನ್ನು ಇತ್ತೀಚೆಗಷ್ಟೇ (ಜುಲೈ 2) ಸರಳವಾಗಿ ಆಚರಿಸಿಕೊಂಡಿರುವ ಈ ಗೋಲ್ಡನ್ ಸ್ಟಾರ್ ನಟನೆಯನ್ನು ಆರಂಭಿಸಿ ಇಪ್ಪತ್ತು ವರ್ಷಗಳು ಸಂದಿವೆ. ನಾಯಕನಟನಾಗಿ ಪರಿಚಯವಾಗಿ ಹದಿನೈದು ವರ್ಷಗಳಾಗಿವೆ.

'ನಾನು ಮಧ್ಯಮವರ್ಗದ ಕುಟುಂಬದಿಂದ ಬಂದವನು. ಒಂದು ದೊಡ್ಡ ಕನಸನ್ನು ಕಟ್ಟಿಕೊಂಡು ಇದನ್ನು ಸಾಧಿಸಲೇಬೇಕು ಎಂದುಕೊಂಡು ಬಂದವನು ನಾನು. ಸಿನಿಮಾ ಬಿಟ್ಟು ಬೇರೆ ಏನೂ ಗೊತ್ತಿರಲಿಲ್ಲ. ಜನರ ಆಶೀರ್ವಾದ, ಪ್ರೀತಿ ನನ್ನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ಈಗ ತಿರುಗಿ ನೋಡಿದಾಗ, ಓಹ್, ಎಲ್ಲಿಂದ ಎಲ್ಲಿಗೆ ಬಂದುಬಿಟ್ಟೆನಲ್ಲ ಅನಿಸುತ್ತದೆ. ನಾನು ಕಾರಿನಲ್ಲಿ ಹೋಗುವಾಗ ಅದೇ ಜಾಗದಲ್ಲಿ ಬೈಕ್‌ನಲ್ಲಿ, ಬಸ್‌ನಲ್ಲಿ ಓಡಾಡಿದ ನೆನಪುಗಳು ಬರುತ್ತವೆ. ಖುಷಿಯಾಗುತ್ತದೆ. ಈ ಮಟ್ಟಕ್ಕೆ ಜನಪ್ರಿಯತೆ ಕೊಟ್ಟಿದ್ದಾನಲ್ಲಾ ದೇವರು... ಇದೇನು ಮ್ಯಾಜಿಕ್ಕಾ?' ಎಂದು ಭಾವುಕರಾಗುತ್ತಾರೆ ಗಣೇಶ್.

ತಮ್ಮ ನಟನಾಪಯಣದಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ ಬಗ್ಗೆಯೂ ಅವರಿಗೆ ಅಷ್ಟೇ ಖುಷಿಯಿದೆ. 'ಈ ವಿಷಯದಲ್ಲಿ ನಾನು ತುಂಬ ಅದೃಷ್ಟವಂತ. ನನ್ನ ಒಂದೊಂದು ಸಿನಿಮಾ ಕೂಡ ಒಂದೊಂದು ಮಾನವೀಯ ಮೌಲ್ಯದ ಬಗ್ಗೆ ಹೇಳುತ್ತದೆ. ಪ್ರೀತಿ ಬಗ್ಗೆ ಹೇಳುತ್ತದೆ. ಸಂಬಂಧಗಳ ಬಗ್ಗೆ ಹೇಳುತ್ತದೆ. ಕಮರ್ಷಿಯಲ್ ಹೀರೊ ಆಗಿ ಪ್ರಯೋಗಗಳನ್ನೂ ಮಾಡಿರುವೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಸಿನಿಮಾ ಅನ್ನುವುದು ಕಮರ್ಷಿಯಲ್ ಬ್ಯುಸಿನೆಸ್. ವ್ಯಾಪಾರಿ ದೃಷ್ಟಿಯಿಂದ ಗೆಲ್ಲುವುದು ತುಂಬ ಮುಖ್ಯ. ಆದರೆ ಈ ವ್ಯಾಪಾರಿ ಚೌಕಟ್ಟಿನೊಳಗೆ ಕೂಡ ನಮಗೆ ಇಷ್ಟವಾಗುವ ಕೆಲಸ ಮಾಡುವ ಅವಕಾಶ ಸಿಗುವುದಿದೆಯಲ್ಲ. ಅದು ಅದೃಷ್ಟ. ಯಾಕೆಂದರೆ ನಾನು ವರ್ಷಕ್ಕೆ ಮಾಡುವುದು ಮೂರು ಸಿನಿಮಾ. ಈ ಮೂರು ಸಿನಿಮಾ ಮಾಡಲು ಮೂವತ್ತು ಜನರು ಭೇಟಿಯಾಗಿರುತ್ತಾರೆ. ಒಂದಿಪ್ಪತ್ತೈದು ಕಥೆಗಳನ್ನು ಕೇಳಿರ್ತೀವಿ. ಮತ್ತೂ ಎಷ್ಟೋ ಒನ್‌ಲೈನ್‌ಗಳನ್ನು ಕೇಳಿರ್ತೀವಿ. ಅವುಗಳಲ್ಲಿ ಬೆಟರ್ ಅಂದುಕೊಂಡಿದ್ದನ್ನು ಆಯ್ದುಕೊಳ್ಳುತ್ತೇವೆ. ಅದರಲ್ಲಿಯೂ ಕೆಲವು ಸಲ ಎಡವುತ್ತೇವೆ. ಇವೆಲ್ಲವೂ ಬದುಕಿನ ಭಾಗ ಅಷ್ಟೆ' ಎನ್ನುವ ಗಣೇಶ್,